# Akashvani : Bangalore
# National Bulletin In Kannada
# 12.08.2024 / 13.10 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**12.08.2024 / 13.10 hrs**

<><*<><>*><>

<u>ಮುಖ್ಯಾಂಶಗಳು</u>

<><*<><>*><>

೧. ಬಿಹಾರದ ಜೆಹ್ವಾನಾಬಾದ್ ಜಿಲ್ಲೆಯಲ್ಲಿ ಕಾಲ್ತುಳಿತ ೭ ಮಂದಿ ಸಾವು ; ೧೭ ಮಂದಿಗೆ ಗಾಯ

೨. ಇಂದು ವಿಶ್ವ ಆನೆಗಳ ದಿನ ; ಆನೆಗಳ ಸಂಖ್ಯೆ ಹೆಚ್ಚಳಕ್ಕೆ ಪ್ರಧಾನಿ ಸಂತಸ

೩. ಇದೇ ೨೫ರಂದು ಆಕಾಶವಾಣಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮನದ ಮಾತು

೪. ಪ್ಯಾರಿಸ್ ಒಲಿಂಪಿಕ್ಸ್ ೨೦೨೪ಕ್ಕೆ ವರ್ಣರಂಜಿತ ತೆರೆ ; ಮುಂದಿನ ಒಲಿಂಪಿಕ್ಸ್ ಅಮೆರಿಕದ ಲಾಸ್ ಎಂಜಿಲಿಸ್‌ನಲ್ಲಿ

<><*<><>*><>

ಬಿಹಾರದ ಜೆಹ್ವಾನಾಬಾದ್ ಜಿಲ್ಲೆಯ ವನವಾರ್‌ನ ಬಾಬಾ ಸಿದ್ದೇಶ್ವರ್‌ನಾಥ ದೇಗುಲದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಕನಿಷ್ಠ ೭ ಮಂದಿ ಭಕ್ತಾದಿಗಳು ಮೃತಪಟ್ಟಿದ್ದು, ೧೬ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಮಧ್ಯರಾತ್ರಿ ೧ ಗಂಟೆ ಸುಮಾರಿನಲ್ಲಿ ಸ್ಥಳೀಯ ವ್ಯಾಪಾರಿಗಳು ಹಾಗೂ ಭಕ್ತರ ನಡುವೆ ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ ವಾಗ್ವಾದ ನಡೆದ ನಂತರ ಕಾಲ್ತುಳಿತ ಸಂಭವಿಸಿದೆ ಎಂದು ಜೆಹ್ವಾನಾಬಾದ್ ಪೊಲೀಸ್ ವರಿಷ್ಠಾಧಿಕಾರಿ ಅರವಿಂದ್ ಪ್ರತಾಪ್ ಸಿಂಗ್ ಹೇಳಿದ್ದಾರೆ. ದೇವಾಲಯದ ಆವರಣವು ಅತ್ಯಂತ ಕಿರಿದಾದ ಸ್ಥಳದಲ್ಲಿದ್ದು, ನೂಕುನುಗ್ಗಲಿನಿಂದಾಗಿ ಕಾಲ್ತುಳಿತ ಸಂಭವಿಸಿದೆ ಎಂದು ಮಾಹಿತಿ ನೀಡಿದ್ದಾರೆ. ಶ್ರಾವಣ ಸೋಮವಾರ ಹಿನ್ನೆಲೆಯಲ್ಲಿ ಸುಪ್ರಸಿದ್ಧ ವನವರ್ ಬೆಟ್ಟಗಳ ಮೇಲಿರುವ ದೇವಾಲಯದಲ್ಲಿ ಶಿವನಿಗೆ ಜಲಾಭಿಷೇಕ ಮಾಡಲು ಹೆಚ್ಚಿನ ಸಂಖ್ಯೆಯ ಭಕ್ತರು ಜಮಾಯಿಸಿದ್ದರು. ಈ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿದೆ. ಗಾಯಗೊಂಡವರನ್ನು ಜೆಹ್ವಾನಾಬಾದ್ ಸದರ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಿಂಗ್ ಹೇಳಿದ್ದಾರೆ. ಘಟನೆ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ವಿವರಿಸಿದ್ದಾರೆ. ಕಾಲ್ತುಳಿತದಲ್ಲಿ ಉಂಟಾದ ಸಾವು-ನೋವುಗಳಿಗೆ ಮುಖ್ಯಮಂತ್ರಿ ನಿತೀಶ್ ಕುಮಾರ್

ಸಂತಾಪ ವ್ಯಕ್ತಪಡಿಸಿದ್ದು, ಮೃತಪಟ್ಟ ವ್ಯಕ್ತಿಗಳ ಕುಟುಂಬಗಳಿಗೆ ೪ ಲಕ್ಷ ರೂಪಾಯಿ, ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿ ಪರಿಹಾರ ನೀಡಲಾಗುವುದು ಎಂದು ಪ್ರಕಟಿಸಿದ್ದಾರೆ.

<><*<><>*><>

ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯ ಸಿದ್ಧತೆಗಳನ್ನು ಪರಿಶೀಲಿಸಲು ಭಾರತೀಯ ಚುನಾವಣಾ ಆಯೋಗದ ತಂಡ ಇಂದಿನಿಂದ ಎರಡು ದಿನಗಳ ಕಾಲ ಹರಿಯಾಣಕ್ಕೆ ಭೇಟಿ ನೀಡಲಿದೆ. ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಆಯುಕ್ತರಾದ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಸೇರಿದಂತೆ ಇತರ ಅಧಿಕಾರಿಗಳು ವಿವಿಧ ಸಭೆಗಳನ್ನು ನಡೆಸಲಿದ್ದಾರೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಜಿಲ್ಲಾ ಚುನಾವಣಾ ಅಧಿಕಾರಿಗಳು ಮತ್ತು ಹರಿಯಾಣದ ಹಿರಿಯ ಅಧಿಕಾರಿಗಳೊಂದಿಗೆ ಚುನಾವಣಾ ಸಿದ್ಧತೆಗಳನ್ನು ಆಯೋಗ ಪರಿಶೀಲಿಸಲಿದೆ ಎಂದು ಹರಿಯಾಣ ಮುಖ್ಯ ಚುನಾವಣಾಧಿಕಾರಿ ಪಂಕಜ್ ಅಗರ್ವಾಲ್ ಹೇಳಿದ್ದಾರೆ. ಆಯೋಗ ಇತರ ವ್ಯವಸ್ಥೆಗಳನ್ನು ಪರಿಶೀಲಿಸಲು ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು, ಇತರ ಆಡಳಿತ ಕಾರ್ಯದರ್ಶಿಗಳು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ನಿರ್ಣಾಯಕ ಸಭೆಗಳನ್ನು ನಡೆಸಲಿದೆ.

<><*<><>*><>

ಇಂದು ವಿಶ್ವ ಆನೆಗಳ ದಿನ. ಆನೆಗಳ ಆವಾಸ ಸ್ಥಾನ, ವಿಹಾರದ ಕಾರಿಡಾರ್ ಸಂರಕ್ಷಣೆ ಸೇರಿದಂತೆ, ಪಳಗಿಸಲಾದ ಆನೆಗಳ ಯೋಗಕ್ಷೇಮ ಕುರಿತು ಜನ ಜಾಗೃತಿ ಮೂಡಿಸುವ ಭಾಗವಾಗಿ ಈ ದಿನವನ್ನು ಆಚರಿಸಲ್ಪಡುತ್ತದೆ. ರಾಜ್ಯದ ದುಬಾರೆ ಮತ್ತು ಸಕ್ರೆಬೈಲು ಆನೆ ಶಿಬಿರಗಳಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಶ್ವ ಆನೆ ದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, ತಮ್ಮ ಸಾಮಾಜಿಕ ಮಾಧ್ಯಮ ಎಕ್ಸ್ ಖಾತೆಯಲ್ಲಿ 'ವಿಶ್ವ ಆನೆ ದಿನವು, ಆನೆಗಳನ್ನು ರಕ್ಷಿಸಲು ಸಮುದಾಯದ ವ್ಯಾಪಕ ಪ್ರಯತ್ನಗಳನ್ನು ಪ್ರಶಂಸಿಸಲು ಒಂದು ಸಂದರ್ಭವಾಗಿದೆ. ಹಾಗೆಯೇ, ಆನೆಗಳು ಅಭಿವೃದ್ಧಿ ಹೊಂದಲು ಅನುಕೂಲಕರವಾದ ವಾಸಸ್ಥಾನವನ್ನು ಪಡೆಯಲು ಸಾಧ್ಯವಿರುವ ಎಲ್ಲವನ್ನೂ ಮಾಡುವ ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ ಎಂದು ಹೇಳಿದ್ದಾರೆ. ಭಾರತದಲ್ಲಿ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಆನೆಯು ಮಹತ್ವದ ಪಾತ್ರ ಹೊಂದಿದೆ. ಕಳೆದ ಕೆಲವು ವರ್ಷಗಳಿಂದ, ಆನೆಗಳ ಸಂಖ್ಯೆಯು ಹೆಚ್ಚುತ್ತಿದೆ ಎಂಬುದು ಸಂತೋಷದ ಸಂಗತಿ ಎಂಬುದಾಗಿ ಪ್ರಧಾನಿ ಸಂತಸ ಹಂಚಿಕೊಂಡಿದ್ದಾರೆ.

<><*<><>*><>

ಭಾರತವು ಚಂದ್ರನ ಮೇಲೆ ಇಳಿದ ನಾಲ್ಕನೇ ದೇಶವಾಗಿದ್ದು, ೨೦೨೩ರ ಆಗಸ್ಟ್ ೨೩ ರಂದು ಚಂದ್ರನ ದಕ್ಷಿಣ ಧ್ರುವ ಪ್ರದೇಶವನ್ನು ತಲುಪಿದ ಮೊದಲ ದೇಶವಾಗಿದೆ. ಈ ಮಹತ್ವದ ಸಾಧನೆಯನ್ನು ಗೌರವಿಸಲು ಪ್ರಧಾನಿ ನರೇಂದ್ರ ಮೋದಿ ಆಗಸ್ಟ್ ೨೩ರನ್ನು ರಾಷ್ಟ್ರೀಯ ಬಾಹ್ಯಾಕಾಶ ದಿನ ಎಂದು ಘೋಷಿಸಿದ್ದರು. ಭಾರತ ಇದೇ ೨೩ ರಂದು ಮೊಟ್ಟ ಮೊದಲ ರಾಷ್ಟ್ರೀಯ ಬಾಹ್ಯಾಕಾಶ ದಿನವನ್ನು ಆಚರಿಸಲಿದ್ದು, 'ಚಂದ್ರನನ್ನು ಸ್ಪರ್ಶಿಸುವಾಗ ಜೀವನವನ್ನು ಸ್ಪರ್ಶಿಸುವುದು, ಭಾರತದ ಬಾಹ್ಯಾಕಾಶ 'ಯಶೋಗಾಥೆ' ಎಂಬ ವಿಷಯದೊಂದಿಗೆ ರಾಷ್ಟ್ರೀಯ ದಿನ ಆಚರಿಸಲಿದೆ. ಬಾಹ್ಯಾಕಾಶ ರಂಗದಲ್ಲಿ ಭಾರತದ ಗಮನಾರ್ಹ ಸಾಧನೆಗಳು ಸಮಾಜಕ್ಕೆ ಆಳವಾದ ಪ್ರಯೋಜನಗಳು, ಬಾಹ್ಯಾಕಾಶ ಕಾರ್ಯಕ್ರಮದೊಂದಿಗೆ ತೊಡಗಿಸಿಕೊಳ್ಳಲು ಎಲ್ಲ ಹಂತಗಳ ಜನರಿಗೆ ಅವಕಾಶ ಕಲ್ಪಿಸುವ

ಅಸಂಖ್ಯಾತ ಘಟನೆಗಳು ಈ ಸಂದರ್ಭದಲ್ಲಿ ತೆರೆದುಕೊಳ್ಳುತ್ತದೆ. ಬಾಹ್ಯಾಕಾಶ ದಿನದ ಆಚರಣೆಯ ಕಾರ್ಯಕ್ರಮವು ಇದೇ ೨೨ ಮತ್ತು ೨೩ರಂದು ನವದೆಹಲಿಯಲ್ಲಿ ಸಮಾಪನಗೊಳ್ಳಲಿದೆ.

<><*<><>*><>

ಸಿಕ್ಕಿಂನಲ್ಲಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಉಂಟಾದ ಹಠಾತ್ ಪ್ರವಾಹದಿಂದ ತೀವ್ರ ಹಾನಿಗೊಳಗಾಗಿದ್ದ ಇಂದ್ರಾಣಿ ಸೇತುವೆಯನ್ನು ಗಡಿರಸ್ತೆಗಳ ಸಂಸ್ಥೆ - ಬಿಆರ್‌ಒ ಯಶಸ್ವಿಯಾಗಿ ಪುನರ್ ನಿರ್ಮಿಸಿದೆ.  ಸೇತುವೆ ಪುನರ್ ನಿರ್ಮಾಣದಿಂದ ಸಿಕ್ಕಿಂನ ಉತ್ತರದ ಪ್ರದೇಶಗಳು ಭಾರತದ ಉಳಿದ ಭಾಗಗಳೊಂದಿಗೆ ಮರುಸಂಪರ್ಕ ಪಡೆದಂತಾಗಿದೆ. ಸ್ವಸ್ತಿಕ್ ಯೋಜನೆಯಡಿಯಲ್ಲಿ ೭೬೪ ಗಡಿ ರಸ್ತೆಗಳ ಸಂಸ್ಥೆಯ ಕಾರ್ಯಪಡೆ ನೇತೃತ್ವದಲ್ಲಿ ಪುನರ್ ನಿರ್ಮಾಣಗೊಂಡ ಸೇತುವೆ ಯೋಜನೆಯಲ್ಲಿ ೩೦೦ ಅಡಿ ತೂಗು ಸೇತುವೆಯೂ ಒಳಗೊಂಡಿದೆ. ಸಿಕ್ಕಿಂನ ಪುನಶ್ಚೇತನ ಹಾಗೂ ಭವಿಷ್ಯದ ಅಭಿವೃದ್ಧಿಯಲ್ಲಿ ಮೂಲಸೌಕರ್ಯ ಪುನರ್‌ಸ್ಥಾಪಿಸಲು ಅಗತ್ಯವಿರುವ ಇಂಜಿನಿಯರಿಂಗ್ ಕೌಶಲ್ಯ ಹಾಗೂ ಸಹಯೋಗವನ್ನು ಇದು ಎತ್ತಿ ತೋರಿಸುತ್ತವೆ. ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯಲ್ಲಿ ಸೇತುವೆ ಪ್ರಮುಖ ಪಾತ್ರ ವಹಿಸಿದೆ.

<><*<><>*><>

ಇದೇ ಆಗಸ್ಟ್ ತಿಂಗಳ ೨೫ ರಂದು ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ದೇಶ ಬಾಂಧವರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ ಮಾಸಿಕ ಬಾನುಲಿ ಕಾರ್ಯಕ್ರಮದ ೧೧೩ ನೇ ಸಂಚಿಕೆಯಾಗಿದೆ. ಮುಂಬರುವ ಮನದಮಾತಿಗಾಗಿ ಜನರು ತಮ್ಮ ಆಲೋಚನೆಗಳು ಮತ್ತು ಸಲಹೆಗಳನ್ನು ಟೋಲ್ ಫ್ರೀ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಸಲ್ಲಿಸಬಹುದು. ನರೇಂದ್ರ ಮೋದಿ ಆಪ್ ಅಥವಾ ಮೈಗೌವ್ ಓಪನ್ ಫೋರಮ್ ಮೂಲಕ ಜನರು ತಮ್ಮ ಸಲಹೆಗಳನ್ನು ಆನ್‌ಲೈನ್‌ನಲ್ಲಿ ಹಂಚಿಕೊಳ್ಳಬಹುದು. ಮುಂಬರುವ ಸಂಚಿಕೆಗಾಗಿ ಎಲ್ಲಾ ಸಲಹೆಗಳನ್ನು ಈ ತಿಂಗಳ ೨೩ ರವರೆಗೆ ಸ್ವೀಕರಿಸಲಾಗುತ್ತದೆ. ಮನ್ ಕಿ ಬಾತ್ ಕಾರ್ಯಕ್ರಮವನ್ನು ಆಕಾಶವಾಣಿ ಹಾಗೂ ದೂರದರ್ಶನ, ಏರ್ ನ್ಯೂಸ್ ವೆಬ್‌ಸೈಟ್ ಮತ್ತು ನ್ಯೂಸ್‌ಏರ್ ಮೊಬೈಲ್ ಅಪ್ಲಿಕೇಶನ್‌ನ ಸಂಪೂರ್ಣ ಜಾಲದಲ್ಲಿ ಪ್ರಸಾರ ಮಾಡಲಾಗುತ್ತದೆ. ಇದು ಎಐಆರ್ ನ್ಯೂಸ್, ಡಿಡಿ ನ್ಯೂಸ್, ಪಿಎಂಒ ಹಾಗೂ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ಚಾನೆಲ್‌ಗಳಲ್ಲಿ ನೇರಪ್ರಸಾರವಾಗಲಿದೆ.

<><*<><>*><>

ಪ್ಯಾರಿಸ್ ಒಲಿಂಪಿಕ್ಸ್ ೨೦೨೪ ಫ್ರಾನ್ಸ್‌ನ ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ವರ್ಣರಂಜಿತ ಸಮಾರಂಭದೊಂದಿಗೆ ಸಮಾಪನಗೊಂಡಿತು. ಭಾರತವು ಒಂದು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಒಳಗೊಂಡಂತೆ ಒಟ್ಟು ೬ ಪದಕಗಳೊಂದಿಗೆ ಒಟ್ಟಾರೆ ಪದಕ ಪಟ್ಟಿಯಲ್ಲಿ ೭೧ನೇ ಸ್ಥಾನದಲ್ಲಿದೆ. ೪೦ ಚಿನ್ನ ಸೇರಿದಂತೆ ಒಟ್ಟು ೧೨೬ ಪದಕಗಳೊಂದಿಗೆ ಅಮೆರಿಕ ಒಲಿಂಪಿಕ್ ಪದಕಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಚೀನಾ ೯೧ ಪದಕಗಳೊಂದಿಗೆ ನಲವತ್ತು ಚಿನ್ನದೊಂದಿಗೆ ಎರಡನೇ ಸ್ಥಾನದಲ್ಲಿದೆ. ಜಪಾನ್ ೨೦ ಚಿನ್ನ ಸೇರಿದಂತೆ ೪೫ ಪದಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ ಮತ್ತು ಆಸ್ಟ್ರೇಲಿಯಾ ೧೮ ಚಿನ್ನ ಮತ್ತು ಒಟ್ಟಾರೆ ೫೩ ಪದಕಗಳೊಂದಿಗೆ ೪ನೇ ಸ್ಥಾನದಲ್ಲಿದೆ. ಒಲಿಂಪಿಕ್ ಪದಕ ವಿಜೇತರಾದ ಪಿಆರ್ ಶ್ರೀಜೇಶ್ ಮತ್ತು ಮನು ಭಾಕರ್ ಅವರು ಸಮಾರೋಪ ಸಮಾರಂಭದಲ್ಲಿ ಭಾರತದ ಧ್ವಜಧಾರಿಗಳಾಗಿ ಪರೇಡ್‌ನಲ್ಲಿ ದೇಶವನ್ನು ಪ್ರತಿನಿಧಿಸಿದರು. ತಮ್ಮ ಅಸಾಧಾರಣ ಗೋಲ್ ಕೀಪಿಂಗ್ ಕೌಶಲ್ಯಕ್ಕಾಗಿ

'ಭಾರತದ ಗೋಡೆ' ಎಂದು ಕರೆಯಲ್ಪಡುವ ಶ್ರೀಜೇಶ್ ಈ ಆವೃತ್ತಿಯ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನಂತರ ಹಾಕಿಯಿಂದ ನಿವೃತ್ತರಾದರು. ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದೇ ಆವೃತ್ತಿಯ ಕ್ರೀಡಾಕೂಟದಲ್ಲಿ ಎರಡು ಪದಕ ಗೆದ್ದ ಮೊದಲ ಭಾರತೀಯ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಮನು ಭಾಕರ್ ಭಾಜನರಾಗಿ ಇತಿಹಾಸ ನಿರ್ಮಿಸಿದರು. ಸಮಾರೋಪ ಸಮಾರಂಭದಲ್ಲಿ, ಒಲಿಂಪಿಕ್ ಜ್ವಾಲೆಯನ್ನು ನಂದಿಸಲಾಯಿತು ಮತ್ತು ಒಲಿಂಪಿಕ್ ಧ್ವಜವನ್ನು ಅಮೆರಿಕದ ಲಾಸ್ ಏಂಜಲೀಸ್-೨೦೨೮ ಸಂಘಟನಾ ಸಮಿತಿಗೆ ಹಸ್ತಾಂತರಿಸಲಾಯಿತು. ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಸಾಮಾಜಿಕ ಮಾಧ್ಯಮ ಎಕ್ಸ್ ಖಾತೆಯ ಮೂಲಕ ೨೦೨೪ ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತೀಯ ಕ್ರೀಡಪಟುಗಳ ಪ್ರದರ್ಶನವನ್ನು ಶ್ಲಾಘಿಸುತ್ತಾ 'ಎಲ್ಲಾ ಅಥ್ಲೀಟ್‌ಗಳು ತಮ್ಮ ಅತ್ಯುತ್ತಮ ಕೊಡುಗೆ ನೀಡಿದ್ದಾರೆ ಮತ್ತು ಪ್ರತಿಯೊಬ್ಬ ಭಾರತೀಯರು ಅವರ ಬಗ್ಗೆ ಹೆಮ್ಮೆ ಪಡುತ್ತಾರೆ' ಎಂಬ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಮೂಲಕ ಕ್ರೀಡಾ ವೀರರಿಗೆ ಅವರ ಮುಂಬರುವ ಕ್ರೀಡಾಕೂಟಗಳಿಗೆ ಶುಭ ಹಾರೈಸಿದ್ದಾರೆ.

<><*<><>*><>

ವಿನೇಶ್ ಫೋಗಟ್ ಅವರ ಅನರ್ಹತೆ ಸಂಬಂಧ ಭಾರತೀಯ ಒಲಿಂಪಿಕ್ಸ್ ಅಸೋಸಿಯೇಷನ್‌ನ ವೈದ್ಯಕೀಯ ತಂಡವನ್ನು - ಐಒಎ ಅಧ್ಯಕ್ಷೆ ಪಿ.ಟಿ. ಉಷಾ, ಸಮರ್ಥಿಸಿಕೊಂಡಿದ್ದಾರೆ. ಪ್ಯಾರೀಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ೫೦ ಕೆ.ಜಿ. ವಿಭಾಗದ ಫೈನಲ್ಸ್‌ನಿಂದ ಭಾರತದ ಕುಸ್ತಿಪಟು ವಿನೇಶ್ ಫೊಗಟ್ ಅನರ್ಹತೆಗೆ ಭಾರತೀಯ ತಂಡದ ಮುಖ್ಯ ವೈದ್ಯಕೀಯ ಅಧಿಕಾರಿ ಡಾ. ದಿನ್ ಶಾ ಪರ್ದಿವಾಲಾ ಅವರನ್ನು ಹೊಣೆಯಾಗಿಸಬಾರದು ಎಂದು ಹೇಳಿದ್ದಾರೆ. ಕುಸ್ತಿ, ಬಾಕ್ಸಿಂಗ್ ಹಾಗೂ ಜ್ಯುಡೊದಂತಹ ಸಮರ ಕ್ರೀಡೆಗಳಲ್ಲಿ ತೂಕ ನಿರ್ವಹಣೆಯ ಜವಾಬ್ದಾರಿ ಪ್ರತಿಯೊಬ್ಬ ಕ್ರೀಡಾಪಟು ಹಾಗೂ ಅವರ ವೈಯಕ್ತಿಕ ತರಬೇತುದಾರರ ತಂಡದ ಮೇಲಿದೆ ಎಂದು ಐಒಎ ಹೇಳಿಕೆ ತಿಳಿಸಿದೆ. ಅಥ್ಲೀಟ್‌ಗಳು ತಮ್ಮ ಸ್ಪರ್ಧೆಯ ಸಮಯದಲ್ಲಿ ಹಾಗೂ ನಂತರ ಚೇತರಿಕೆ ಹಾಗೂ ಗಾಯದ ನಿರ್ವಹಣೆಯಲ್ಲಿ ನೆರವು ನೀಡುವುದು ಡಾ. ದಿನ್ ಶಾ ಪರ್ದಿವಾಲಾ ಅವರ ಪ್ರಾಥಮಿಕ ಪಾತ್ರವಾಗಿದೆ ಎಂದು ಐಒಎ ಸ್ಪಷ್ಟ ಪಡಿಸಿದೆ. ಇದಕ್ಕೂ ಮೊದಲು ವಿನೇಶ್ ಫೋಗಟ್ ತಮ್ಮ ೫೦ ಕೆ.ಜಿ. ಕುಸ್ತಿ ವಿಭಾಗದ ತೂಕದ ಮಿತಿ ಮೀರಿದ ನಂತರ ಫೈನಲ್‌ಗೆ ಮುನ್ನವೇ ಅನರ್ಹಗೊಂಡಿದ್ದರು. ನಂತರ ಅವರು, ಕ್ರೀಡೆಗಾಗಿರುವ ಮಧ್ಯಸ್ಥಿಕೆ ನ್ಯಾಯಮಂಡಳಿಯಲ್ಲಿ ಒಲಿಂಪಿಕ್ ಅನರ್ಹತೆಯ ವಿರುದ್ಧ ಮೇಲ್ಮನವಿ ಸಲ್ಲಿಸಿದರು. ೫೦ ಕೆ.ಜಿ. ತೂಕದ ವಿಭಾಗದಲ್ಲಿ ಜಂಟಿ ಬೆಳ್ಳಿ ಪದಕಕ್ಕಾಗಿ ಒತ್ತಾಯಿಸಿದ್ದರು. ನಾಳೆ ಅಂತಿಮ ತೀರ್ಪು ಪ್ರಕಟವಾಗುವ ಸಾಧ್ಯತೆಯಿದೆ.

<><*<><>*><>

ಮೊದಲ ಜಾಗತಿಕ ಮಹಿಳಾ ಕಬಡ್ಡಿ ಲೀಗ್ ಮುಂದಿನ ತಿಂಗಳು ಹರಿಯಾಣದಲ್ಲಿ ಆರಂಭವಾಗಲಿದೆ. ಅಧಿಕೃತವಾಗಿ ಗ್ಲೋಬಲ್ ಪ್ರವಾಸಿ ಮಹಿಳಾ ಕಬಡ್ಡಿ ಲೀಗ್ ಎಂದು ಹೆಸರಿಸಲಾಗಿರುವ ಈ ಪಂದ್ಯಾವಳಿಯಲ್ಲಿ ೧೫ ದೇಶಗಳ ಮಹಿಳಾ ಕ್ರೀಡಾಪಟುಗಳು ಭಾಗಿಯಾಗಲಿದ್ದಾರೆ. ಈ ಪಂದ್ಯಾವಳಿಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಬಡ್ಡಿಯನ್ನು ಉತ್ತೇಜಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಪ್ರತಿನಿಧಿಸಲಿದೆ. ಒಲಿಂಪಿಕ್ ಕ್ರೀಡಾಕೂಟದಲ್ಲಿ ಈ ಕ್ರೀಡೆಯನ್ನು ಸೇರಿಸುವ ಪ್ರಯತ್ನಗಳನ್ನು ಬೆಂಬಲಿಸುತ್ತದೆ ಮತ್ತು ೨೦೩೬ ರ ಒಲಿಂಪಿಕ್ಸ್‌ಗೆ ಆತಿಥ್ಯ ವಹಿಸುವ ಭಾರತದ ಪ್ರಯತ್ನವನ್ನು ಉತ್ತೇಜಿಸುತ್ತದೆ.

<><*<><>*><>

ಭಾರತೀಯ ಹವಾಮಾನ ಇಲಾಖೆ ಇಂದು ಪೂರ್ವ ರಾಜಸ್ಥಾನ, ಅಸ್ಸಾಂ, ಮೇಘಾಲಯ ಮತ್ತು ಬಿಹಾರದ ಸ್ಥಳಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿದೆ. ಮುಂದಿನ ನಾಲ್ಕು ದಿನಗಳಲ್ಲಿ ಕೇರಳ, ಮಾಹೆ, ತಮಿಳುನಾಡು ಮತ್ತು ಕsssರ್ನಾಟಕದ ಉತ್ತರ ಒಳನಾಡಿನಲ್ಲಿ ಭಾರೀ ಮಳೆಯಾಗಲಿದೆ ಎಂದು ಅಂದಾಜಿಸಲಾಗಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಗಿದೆ <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ <>*><>